C.C. No.- 6700/2025
CW-6/ PW-3

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ
(ಸಂಚಾರಿ ನ್ಯಾಯಾಲಯ) ಕಾರಟಗಿ.
ಸಾಕ್ಷಿಯನ್ನು ದಿನಾಂಕ- **17.02.2026** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಭೋಗೇಶ |
| ತಂದೆ / ಗಂಡನ ಹೆಸರು- | ಬಸಪ್ಪ |
| ವಯಸ್ಸು- | 36 ವರ್ಷಗಳು |
| ಉದ್ಯೋಗ- | ವ್ಯವಸಾಯ |
| ವಾಸಸ್ಥಳ- | ಕಾರಟಗಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ಚಾ.ಸಾ.1, 2 ಮತ್ತು 5 ಗೊತ್ತು. ಈ ದಿನ ವಿ.ಸಿ ಮೂಲಕ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ದಿನಾಂಕ 15-11-2023 ರಂದು ಚಾ.ಸಾ.1 ರವರ ಮನೆ ಕಳ್ಳತನವಾದ ಮನೆ ಹಿನ್ನೆಲೆಯಲ್ಲಿ ಪೋಲಿಸರು ದಿನಾಂಕ 16-11-2023 ರಂದು ಮಧ್ಯಾಹ್ನ 12.30 ಗಂಟೆಗೆ ಚಾ.ಸಾ.1 ರವರ ಮನೆಗೆ ಬಂದು ನನ್ನ ಹಾಗೂ ಚಾ.ಸಾ.5 ರವರ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 01.30 ವರೆಗೂ ಸ್ಥಳದಲ್ಲಿ ಪಂಚನಾಮೆ ಮಾಡಿದರು. ಆ ಸಮಯದಲ್ಲಿ ಮು.ಮು 1 ರಿಂದ 3 ಇವುಗಳನ್ನು ವಶಪಡಿಸಿಕೊಂಡಿರುತ್ತಾರೆ. ಆದೇ ಸಮಯದಲ್ಲಿ ಪಂಚನಾಮೆಯನ್ನು ಮಾಡಿ ನನ್ನ ಹಾಗೂ ಚಾ.ಸಾ.5 ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವು ಮು.ಮು 1 ರಿಂದ 3 ಗಳನ್ನು ನೋಡಿ ಗುರುತಿಸಿರುತ್ತಾರೆ. ಹಾಗೂ ದಿನಾಂಕಃ 18-08-2025 ರಂದು ನಾನು ಮತ್ತು ಚಾಸಾ-8 ರವರು ಠಾಣೆಗೆ ಹಾಜರಾಗಿದ್ದು, ಅಲ್ಲಿ ಆರೋಪಿತನಿದ್ದು ಪೋಲಿಸರು ಆತನನ್ನು ತೋರಿಸಿ ವಿಚಾರಿಸಿದಾಗ ಆತನ ಹೆಸರು ರಹೀಮ್, ಸಾಃ ಗಂಗಾವತಿ, ಹಾ.ವಃ ತೆಲಂಗಾಣ ಎಂದು ಹೇಳಿದನು. ನಂತರ ಆತನು ತಾನು ತನ್ನೊಂದಿಗೆ ಬಂದನು ಕಳ್ಳತನ ಮಾಡಿದ ಮನೆಯನ್ನು ತೋರಿಸುವುದಾಗಿ ತಿಳಿಸಿದನು. ನಾನು, ಚಾಸಾ-8 ಮತ್ತು ಪೋಲಿಸರು ಹಾಗೂ ಆರೋಪಿತನೊಂದಿಗೆ ಚಾಸಾ-1 ಮತ್ತು

2 ರವರ ಮನೆಗೆ ಹೋಗಿದ್ದು ಆರೋಪಿತನು ಇದೇ ಮನೆಯಲ್ಲಿ 1 ವರೆ ತೊಲೆ ಬಂಗಾರ ಮತ್ತು ರೂ.15,000/- ಕಳ್ಳತನ ಮಾಡಿರುವುದಾಗಿ ತಿಳಿಸಿದನು. ನಂತರ ನನ್ನ ಹಾಗೂ ಚಾಸಾ-8 ರವರ ಸ್ಥಳದಲ್ಲಿ ಮಧ್ಯಾಹ್ನ 3-30 ರಿಂದ 4-30 ಗಂಟೆಯವರೆಗೆ ಪಂಚನಾಮೆ ಜರುಗಿಸಿ ಅದೇ ಸಮಯದಲ್ಲಿ ಭಾವಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿಯು ನನ್ನ ಹಾಗೂ ಚಾಸಾ-8 ರವರ ಸಮಕ್ಷಮ ಆರೋಪಿತನು ತಾನು ಕಳ್ಳತನ ಮಾಡಿ ಖರ್ಚು ಮಾಡಿ ಉಳಿದ ಹಣ ಅಂದರೆ ರೂ.500/- ಮುಖಬೆಲೆಯ ಒಟ್ಟು 65,000/- ಹಣವನ್ನು ಪೋಲಿಸರಿಗೆ ನೀಡಿದ್ದು, ಅದನ್ನು ಪೋಲಿಸರು ಅದನ್ನು ಜಪ್ತಿಪಡಿಸಿಕೊಂಡು ಸಾಯಂಕಾಲ 5-15 ರಿಂದ 6-15 ರವರೆಗೆ ಪಂಚನಾವೆಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನ ಹಾಗೂ ಭಾವಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯುು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರವನ್ನು ನೋಡ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 65,000/- ಹಣವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-4 ಎಂದು ಗುರುತಿಸಲಾಯಿತು.

(ಆರೋಪಿರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.
(ಸಂಚಾರಿ ನ್ಯಾಯಾಲಯ ಕಾರಟಗಿ)